
ಮಗಳೂ ಶ್ರೀಕಂಠನಿಗೆ ಗೌರಿ ಎಂಬ ಮಗಳೂ ಇದ್ದರು. ಇಬ್ಬರೂ ಮನೆಯ ಹತ್ತಿರವಿದ್ದ ಶಾಲೆಗೆ ಹೋಗುತ್ತಿದ್ದರು. ತಂದೆಯು ಕಾಲವಾದ ನಂತರ ನಂಜುಂಡನೇ ಮನೆಯ ಹಿರಿಯವನಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದನು. ಕುಟುಂಬದಲ್ಲಿ ಆಗಾಗ್ಗೆ ಏಳುತ್ತಿದ್ದ ಸಣ್ಣಪುಟ್ಟ ಭಿನ್ನಾಭಿಪ್ರಾಯ, ಜಗಳಗಳನ್ನು ನಂಜುಂಡನು ತಾಳ್ಮೆ ಮತ್ತು ಪ್ರೀತಿಯ ಮಾತುಗಳಿಂದ ಸರಿದೂಗಿಸಿಕೊಂಡು ಹೋಗುತ್ತಿದ್ದನು.

ನಂಜುಂಡನು ಕಾಲೇಜಿನವರೆಗೂ ಓದಿದ್ದನಾದರೂ ಮುಂದೆ ಓದಲಾರದೆ ಕುಲ ಕಸುಬಾದ ಕೃಷಿಯಲ್ಲಿ ತಂದೆಗೆ ಸಹಾಯ ಮಾಡಲು ತನ್ನ ಓದನ್ನು ತ್ಯಾಗ ಮಾಡಿದ್ದನು. ಶ್ರೀಕಂಠನಾದರೂ ಚೆನ್ನಾಗಿ ಓದಲಿ ಎಂಬ ಮನೆಯವರ ಆಸೆಗೆ ವ್ಯತಿರಿಕ್ತವಾಗಿ ಶ್ರೀಕಂಠನಿಗೆ ವಿದ್ಯೆ ತಲೆಗೆ ಹತ್ತದೆ, ಅವನನ್ನು ಹೈಸ್ಕೂಲು ದಾಟಿಸುವಷ್ಟರಲ್ಲಿ ಮನೆಯವರಿಗೆ ಸಾಕಾಗಿತ್ತು. ಆದ್ದರಿಂದ ಕೊನೆಗೆ ಅವನನ್ನು ಶಾಲೆ ಬಿಡಿಸಿ ಬೇಸಾಯಕ್ಕೆ ಹಾಕಿಕೊಂಡರು. ತಾಯಿ–ತಂದೆ ಗತಿಸಿ, ಮಡದಿ ಮಕ್ಕಳಾದರೂ ನಂಜುಂಡನ ಒಳ್ಳೆಯ ಸ್ವಭಾವ ಮಾತ್ರ ಬದಲಾಗಿರಲಿಲ್ಲ. ಮನೆಯಲ್ಲಿ ಸದಾಕಾಲ ಎಲ್ಲರನ್ನೂ ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿದ್ದನು. ಮೊದಮೊದಲು ಶ್ರೀಕಂಠನು ಅಣ್ಣನೊಂದಿಗೆ ಅನ್ಯೋನ್ಯವಾಗಿದ್ದರೂ ಕೂಡ, ಬರುಬರುತ್ತಾ ತಾನು ಮನೆಯಲ್ಲಿ ಕೇವಲ ಕೆಲಸದ ಆಳು, ಯಾಜಮಾನಿಕೆ ಮಾತ್ರ ನಂಜುಂಡನದು, ಒಂದೊಂದು ರೂಪಾಯಿಗೂ ತಾನು ಅವನ ಹತ್ತಿರ ಕೈಚಾಚಬೇಕು ಎಂದು ಅನಿಸತೊಡಗಿತು.



ಇಬ್ಬರೂ ಮೈಮುರಿದು ಬೇಸಾಯ ಮಾಡುತ್ತಿದ್ದರಾದರೂ, ಫಸಲನ್ನು ಮಾರಲು ಮಾತ್ರ ನಂಜುಂಡನೇ ಪಟ್ಟಣಕ್ಕೆ ಹೋಗುತ್ತಿದ್ದನು. ಕೊಡು ಕೊಳ್ಳುವ ಹಣಕಾಸಿನ ವ್ಯವಹಾರವನ್ನೆಲ್ಲಾ ಅವನೇ ನೋಡಿಕೊಳ್ಳುತ್ತಿದ್ದನು. ಇದಕ್ಕೆ ಶ್ರೀಕಂಠನಿಗೆ ತಕ್ಕಮಟ್ಟಿಗೆ ವ್ಯವಹಾರ ಜ್ಞಾನವಿಲ್ಲದ್ದೂ ಕೂಡ ಒಂದು ಕಾರಣ. ಆದರೆ, ಶ್ರೀಕಂಠನಿಗೆ ತಾನು ಅಣ್ಣನಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ ಎಂಬ ಅಹಂಕಾರ ಸುಪ್ತವಾಗಿತ್ತು. ಅದು ಹೊರಗೆ ಸಿಡಿಯುವ ದಿನವೂ ಬಂತು. ಒಮ್ಮೆ ಹೊಲದಲ್ಲಿ ಬೆಳೆದಿದ್ದ ಕಡಲೆಕಾಯಿಯ ಮೂಟೆಗಳನ್ನು ಪಟ್ಟಣಕ್ಕೆ ಮಾರಲು ಹೊರಟ ನಂಜುಂಡನನ್ನು ತಡೆದ ಶ್ರೀಕಂಠನು, “ನಾನು ಮಾತ್ರ ಹೊಲದಲ್ಲಿ ಕೆಲಸ ಮಾಡ್ತಾ ಸಾಯಬೇಕು. ನೀನು ಮಾತ್ರ ಯಾವಾಗ್ಲೂ ಪಟ್ಟಣಕ್ಕೆ ಹೋಗ್ತಾ, ದುಡ್ಡು ಎಣಿಸ್ತಾ, ಮಜಾ ಮಾಡಿಕೊಂಡ್ ತಿರುಗಾಡಬೇಕು. ಇದ್ಯಾವ ಸೀಮೆ ನ್ಯಾಯ? ಇನ್ಮೇಲೆ ನಾನೇ ಮಾರೋದು, ದುಡ್ಡಿನ ಯವಾರ ನಾನೇ ನೋಡ್ಕೋತೀನಿ, ನೀನೇ ಹೊಲದ ಕೆಲಸ ನೋಡ್ಕೋ” ಎಂದು ಅಬ್ಬರಿಸಿದನು. ಜ್ವಾಲಾಮುಖಿಯಂತೆ ಸಿಡಿದ ಅವನ ಮಾತುಗಳನ್ನು ಕೇಳಿ ಎಲ್ಲರೂ ಒಂದು ಕ್ಷಣ ದಂಗಾದರು.

ಕೊನೆಗೆ ಶ್ರೀಕಂಠನ ಹೆಂಡತಿಯೇ ಗಂಡನಿಗೆ, “ಪೇಟೆಗೆ ಹೋಗಿ ಯಾಪಾರ ಮಾಡ್ಲಿಕ್ಕೆ ಸ್ವಲ್ಪ ಓದಿ ವ್ಯವಹಾರ ಗೊತ್ತಿರಬೇಕು. ಭಾವಂಗೆ ಅದೆಲ್ಲಾ ಚೆನ್ನಾಗಿ ಗೊತ್ತೈತೆ, ನೀನೇನಾದ್ರೂ ಹೋದ್ರೆ ಟೋಪಿ ಹಾಕಿಸ್ಕೊಂಡು ಬರೋದಂತೂ ಗ್ಯಾರಂಟಿ” ಎಂದಳು. ಶ್ರೀಕಂಠನು ಹೆಂಡತಿಗೆ, “ಬಾಯ್ಮುಚ್ಚು ಸಾಕು, ನೀನು ಅವನ ಕಡೀಕೆ ನ್ಯಾಯ ಹೇಳು” ಎಂದು ಗದರಿದನು. ಈ ವಿಷಯಕ್ಕೆ ಜಗಳವಾಗಿ ಮನೆಯು ಒಡೆಯುವುದು ನಂಜುಂಡನಿಗೆ ಬೇಕಿರಲಿಲ್ಲ. ಕೊನೆಗೆ ನಂಜುಂಡನು, “ಆಯ್ತು, ಇನ್ಮೇಲೆ ಶ್ರೀಕಂಠನೇ ಪೇಟೆ, ಹಣಕಾಸಿನ ವ್ಯವಹಾರ ನೋಡಿಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ” ಎಂದ.

ನಂತರದ ದಿನಗಳಲ್ಲಿ ಶ್ರೀಕಂಠನೇ ಪೇಟೆಗೆ ಫಸಲನ್ನು ಹಾಕಿಕೊಂಡು ಹೋಗಿ ಮಾರಾಟ ಮಾಡುವುದು ಮಾಡತೊಡಗಿದ. ಹಾಗೆ ಹೊರಟ ಮೇಲೆ ಶ್ರೀಕಂಠನಿಗೆ ಅದರ ಕಷ್ಟಸುಖಗಳು ಪರಿಚಯವಾದವು. ಇಷ್ಟು ದಿವಸ ಅಣ್ಣ ಪೇಟೆಗೆ ಹೋಗಿ ಮಜಾ ಮಾಡ್ತಾ ಇದ್ದಾನೆ ಎಂಬ ಕಲ್ಪನೆಯಿತ್ತು. ಆದರೆ, ಮೂಟೆಗಳನ್ನು ಹಾಕಿಕೊಂಡು ಅಲ್ಲಿಗೆ ಹೋದ ಕ್ಷಣದಿಂದ, ಬಸ್ಸಿನಿಂದ ಅದನ್ನೆಲ್ಲಾ ಇಳಿಸುವುದು, ನಂತರ ಅವನ್ನೆಲ್ಲಾ ತುಂಬಿಕೊಂಡು ಮಾರುಕಟ್ಟೆಗೆ ಹೋಗುವುದು, ಅಲ್ಲಿ ಚೌಕಾಸಿ ಮಾಡುವ ವರ್ತಕರಿಗೆ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವುದು, ಇತ್ಯಾದಿಯೆಲ್ಲಾ ಬರುಬರುತ್ತಾ ಶ್ರೀಕಂಠನಿಗೆ ತಲೆನೋವಿನ ಕೆಲಸವಾಗಿ ತೋರತೊಡಗಿತು.